### ಆಸಕ್ತಿದಾಯಕ ಲೇಖನ

'ಗಾರ್ಡನಿಂಗ್ ಪೇರೆಂಟಿಂಗ್; ಮಕ್ಕಳ ಮನ ಅರಳಿಸುವ ಕಲೆ' (ಮಾ. 27, ಅನಿತಾ ನಾಡಿಗ್) ಲೇಖನ ಆಸಕ್ತಿದಾಯಕವಾಗಿದೆ. ಈ ಕ್ಷಣಕ್ಕೆ ಬೇಕಾದ ಮಾಹಿತಿ. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳ ಮೇಲೆ ಒತ್ತಡ ಹೆಚ್ಚುತ್ತಿರುವ ಸಂದರ್ಭದಲ್ಲಿ, ಇಂಥ ಲೇಖನಗಳ ಅಗತ್ಯ ಹೆಚ್ಚಿದೆ.

—ಸೌಮ್ಯಾ ಶ್ರೀಕಾಂತ್

### ನೋವಿಗೆ ಮಿಡಿದ ಜೀವ


'ಗಂಗಾತಟದ ರತ್ನ' (ಮಾ. 27, ಪ್ರವೀಣ ಕುಲಕರ್ಣಿ) ಒಂದೇ ಜೀವಿತದಲ್ಲಿ ಮೂರು ಶತಮಾನಗಳನ್ನು ಕಂಡ ವಾರಾಣಸಿಯ ಸ್ವಾಮಿ ಶಿವಾನಂದರ ವ್ಯಕ್ತಿಚಿತ್ರ ಹೃದಯಂಗಮ ಬರಹ. ಧರ್ಮದ ಮೂಲಮಂತ್ರ ಪರಿಸುತ್ತಲೇ ಮಾನವ ಧರ್ಮ ಪಾಲಿಸುವ ಶಿವಾನಂದರು 'ಭಾರತ ರತ್ನ'ರೇ ಆಗಿದ್ದಾರೆ ಜನಮಾನಸದಲ್ಲಿ.

—ಸರ್ವಜಿತ, ಹುಬ್ಬಳ್ಳಿ

### ಶಿಕ್ಷಣ ವ್ಯವಸ್ಥೆಯ ಕೈಗನ್ನಡಿ

'ಪಂಜರ ಶಾಲೆ' (ಮಾ. 27, ಜಿ.ವಿ. ಆನಂದ ಮೂರ್ತಿ) 'ವಿಚಾರ ಲಹರಿ' ಬರಹ ಇಂದಿನ ಶಿಕ್ಷಣ ವ್ಯವಸ್ಥೆಗೆ ಹಿಡಿದ ಕೈಗನ್ನಡಿ. ವಿಭಿನ್ನ ಸಾಮರ್ಥ್ಯದ ಮಕ್ಕಳನ್ನು ಒಂದೆಡೆ ದನದ ದೊಡ್ಡಿಗಳಂತಿರುವ ಶಾಲೆಯಲ್ಲಿ ಒಂದೇ ತರಗತಿಯಲ್ಲಿ ಸೇರಿಸಿ ಅವರೆಲ್ಲರಿಗೂ ಒಂದೇ ರೀತಿಯ ಶಿಕ್ಷಣವನ್ನು ಮಾಸ್ ಆಗಿ ನೀಡುತ್ತಿರುವ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಗುವಿನ ಸರ್ವಾಂಗೀಣ ಅಭಿವೃದ್ಧಿಯಂತೂ ಕನಸಿನ ಮಾತೇ ಸರಿ. ಅದರಲ್ಲೂ ವೈವಿಧ್ಯಮಯವಾದ ಕೌಶಲಗಳನ್ನು ಹೊಂದಿರುವ, ಆದರೆ ಕಂಠಪಾಠ ಸಾಮರ್ಥ್ಯವಿಲ್ಲದ, ನೆನಪಿನ ಶಕ್ತಿ ಕಡಿಮೆ ಇರುವ ಮಕ್ಕಳಿಗೆ ಈ ಶಿಕ್ಷಣ ವ್ಯವಸ್ಥೆಯಲ್ಲಿ ಯಾವುದೇ ಸ್ಥಾನಮಾನ ಇಲ್ಲದೆ ಇರುವುದು, ಅಂಥವರ ಕೌಶಲಗಳು ಎಲೆಮರೆಯಕಾಯಾಗಿ ಉದುರಿ ಹೋಗುವುದು ಸಾಮಾನ್ಯವಾಗಿದೆ.

—ಸವಿತಾ ಚಿಗಟೇರಿ, ವಿಜಯನಗರ




### ಕ್ರಿಕೆಟ್ ರಂಗು!

'ಐಪಿಎಲ್ @18' ಹುಚ್ಚುಖೋಡಿ ವಯಸು, ಹೊಡಿಬಡಿ ಆಟದ ಮನಸು' (ಮಾ. 27, ಪ್ರಮೋದ ಕುಲಕರ್ಣಿ) ಮುಖಪುಟ ಲೇಖನ ಸಮಗ್ರವಾಗಿದೆ. ಕ್ರಿಕೆಟ್ ತಾರೆಗಳ ಮುಖಪುಟ ಹೊತ್ತು ಬಂದ 'ಸುಧಾ' ಸುಂದರವಾಗಿದೆ. ಹದಿನೇಳು ತುಂಬಿ ಹದಿನೆಂಟನೇ ವರ್ಷಕ್ಕೆ ಕಾಲಿಟ್ಟಿರುವ ಐಪಿಎಲ್ ಆಟದ ರಂಗು ಟೀಕೆ–ಟಿಪ್ಪಣಿಗಳ ನಡುವೆಯೂ ಹೆಚ್ಚುತ್ತಿರುವುದಂತೂ ಸುಳ್ಳಲ್ಲ. ಕ್ರಿಕೆಟ್‌ಪ್ರೇಮಿಗಳಿಗಂತೂ ಭರಪೂರ ರಸದೌತಣ.

—ಚೇತನ್ ಎನ್., ಬೆಂಗಳೂರು

### ಇಂಥವರ ಸಂಖ್ಯೆ ಹೆಚ್ಚಲಿ

'ಕೆರೆಗಳಿಗೆ ಮರುಹುಟ್ಟು' (ಮಾ. 27, ಡಿ.ಎಂ. ಕುರ್ಕೆ ಪ್ರಶಾಂತ್) ಲೇಖನ ಸ್ಫೂರ್ತಿದಾಯಕವಾಗಿದೆ. ಪ್ರಕೃತಿ ಸಂಪನ್ಮೂಲಗಳ ರಕ್ಷಣೆ ಎಲ್ಲರ ಜವಾಬ್ದಾರಿ ಎಂಬುದನ್ನು ತಿಳಿಸಿ, ಸಮುದಾಯದ ಭಾಗವಹಿಸುವಿಕೆಯಿಂದ ಜಲಸಂರಕ್ಷಣೆ ಹೇಗೆ ಮಾಡಬಹುದೆಂಬುದನ್ನು ಕೆ.ಎ.ಎಸ್. ಅಧಿಕಾರಿ ವರಪ್ರಸಾದ್ ರೆಡ್ಡಿ ತೋರಿಸಿಕೊಟ್ಟಿದ್ದಾರೆ. ಇಂತಹ ಅಧಿಕಾರಿಗಳ ಸಂಖ್ಯೆ ಹೆಚ್ಚಲಿ.

—ಎಸ್. ವಿಶ್ವನಾಥ ಐನಹಳ್ಳಿ, ಮೈಸೂರು

### ಯಶೋಗಾಥೆ

ವರಪ್ರಸಾದ್ ರೆಡ್ಡಿ ಆ ಹಳ್ಳಿಗರಿಗೆ ವರವೇ ಸರಿ. ಇಂತಹ ಯಶೋಗಾಥೆ ಪ್ರಕಟಿಸಿದ 'ಸುಧಾ'ಗೆ ಅಭಿನಂದನೆ.

—ಲಿಂಗರಾಜು ಎಲೆ

### ಸ್ತುತ್ಯರ್ಹ ಕೆಲಸ

ಕೆರೆಗಳ ಪುನಶ್ಚೇತನಕ್ಕೆ ಸ್ತುತ್ಯರ್ಹ ಕೆಲಸ ಮಾಡುತ್ತಿರುವ ವರಪ್ರಸಾದ್ ರೆಡ್ಡಿ ಅಭಿನಂದನೀಯರು. ಜಲ ಸಂಪನ್ಮೂಲಗಳು ಬರಿದಾಗುತ್ತಿರುವ ಇಂದಿನ ದಿನಗಳಲ್ಲಿ, ಸರ್ಕಾರದ ನೆರವಿಲ್ಲದೆ ತಮ್ಮ ಊರಿನ ಕೆರೆಗಳಿಗೆ ಮರುಜೀವ ಕೊಡುತ್ತಿರುವ ಆ ಗ್ರಾಮಸ್ಥರ, ಪ್ರತಿಷ್ಠಾನದ ಅವಿರತ ಪ್ರಯತ್ನ, ಶ್ರಮ, ಉತ್ಸಾಹ ಅನುಕರಣೀಯ.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

### ಸಮಾಜಕ್ಕೆ ಮಾದರಿ

ಸರ್ಕಾರಿ ನೌಕರರಾಗಿದ್ದರೂ ನೌಕರಿಯ ಆಚೆ ಜನಸೇವೆ ಮಾಡುವ ಮೂಲಕ ರೈತರ ಜೀವನಾಡಿಗಳಾದ ಕೆರೆಗಳನ್ನು ಉಳಿಸುವ ಕಾರ್ಯ ಮಾಡುತ್ತಿರುವ ವರಪ್ರಸಾದ್ ರೆಡ್ಡಿ ಅವರು ಇಡೀ ಸಮಾಜಕ್ಕೆ ಮಾದರಿ.

—ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ

### ಬೆರಗುಗೊಳಿಸಿದ ಯಾನ



'ಅನನ್ಯ ಸಾಹಸಯಾನ' (ಮಾ. 27, ಮಂಜುಶ್ರೀ ಎಂ. ಕಡಕೋಳ) ಹೆಣ್ಣುಮಕ್ಕಳು ಹೆಮ್ಮೆಪಡುವ ಲೇಖನ. ಹೆಣ್ಣುಮಕ್ಕಳು ಎಂಥ ಕಠಿಣ ಪರಿಸ್ಥಿತಿಯನ್ನೂ ಸಮರ್ಥವಾಗಿ ನಿಭಾಯಿಸಬಲ್ಲರು ಎಂಬುದನ್ನು ಸತತ 52 ದಿನಗಳ ಕಾಲ ಒಬ್ಬಂಟಿಯಾಗಿ ಸಮುದ್ರಯಾನ ಮಾಡಿದ ಅನನ್ಯ ಸಾಹಸಗಾಥೆ ಸಾಬೀತುಪಡಿಸಿತು. ಬೆರಗುಗೊಳಿಸಿದ ಯಾನ.

—ಅರುಣ್ ಕುಮಾರ್ ತಾರಾನಾಥ್

### ರೋಚಕ ಸಂಗತಿ

ರೋಯಿಂಗ್ ಸ್ಪರ್ಧೆಯಲ್ಲಿ ಮಹಿಳಾ ಪಾರಮ್ಯ ಮೆರೆದ ಅನನ್ಯ ಯಶಸ್ಸು ಪಡೆದಿರುವುದು ರೋಚಕ ಸಂಗತಿ. ಅದರಲ್ಲೂ ಇವರು 'ಕಾಣದ ಕಡಲಿಗೆ ಹಂಬಲಿಸಿದ' ಕವಿ ಶಿವರುದ್ರಪ್ಪ ಅವರ ಮೊಮ್ಮಗಳೆಂಬುದು ಕನ್ನಡಿಗರಿಗೆ ಹೆಮ್ಮೆ.

—ಕೊಹಿಮ, ಬಸರಕೋಡು

### ಹೆಣ್ಣುಮಕ್ಕಳಿಗೆ ಪ್ರೇರಣೆ

ತಾತ ಜಿ.ಎಸ್. ಶಿವರುದ್ರಪ್ಪನವರ ನುಡಿಗಳನ್ನು ಅಟ್ಲಾಂಟಿಕ್ ಮಹಾಸಾಗರ ದಾಟುವ ಮೂಲಕ ನನಸು ಮಾಡಿದ ಮೊಮ್ಮಗಳು ಅನನ್ಯ ಸಾಹಸ ಮೆಚ್ಚತಕ್ಕದ್ದು. ಹೆಣ್ಣುಮಕ್ಕಳಿಗೆ ಪ್ರೇರಣೆ.

—ಶೋಭಾ ಸಂಪತ್, ಬೆಂಗಳೂರು

### ಹೆಮ್ಮೆಯ ಕನ್ನಡತಿ

ಸಾಮಾನ್ಯವಾಗಿ ವೈದರ ಮಕ್ಕಳು ವೈದ್ಯರು, ಶಿಕ್ಷಕರ ಮಕ್ಕಳು ಶಿಕ್ಷಕರು, ಕ್ರೀಡಾಪಟುವಿನ ಮಕ್ಕಳು ಕ್ರೀಡಾಳು ಆಗುತ್ತಾರೆ ಎಂದು ಕೇಳಿದ್ದೆ. ಆದರೆ ಕವಿ ಜಿ.ಎಸ್. ಶಿವರುದ್ರಪ್ಪ ಅವರ ಮೊಮ್ಮಗಳು ಅನನ್ಯ ಪ್ರಸಾದ್ (ತಂದೆ, ತಾಯಿ ವೈದ್ಯರು) ರೋಯಿಂಗ್ ಸ್ಪರ್ಧೆಯ ಕ್ರೀಡಾಳು ಮಾತ್ರವಲ್ಲದೆ ಮಹಿಳೆಯಾಗಿ ರೋಯಿಂಗ್ ಮೂಲಕ ಅಟ್ಲಾಂಟಿಕ್ ಮಹಾಸಾಗರ ದಾಟಿದ ಹೆಮ್ಮೆಯ ಕನ್ನಡತಿಯಾಗಿದ್ದಾರೆ.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

### ರಾತ್ರಿ ಆಕಾಶದ ರೋಮಾಂಚನ

'ಆಹಾ, ಹಾನ್ಲೆ!' (ಮಾ. 27, ಚಂದ್ರಶೇಖರ್ ಜಿ.) ಮಾಹಿತಿಪೂರ್ಣವಾಗಿದ್ದು, ರೋಮಾಂಚನಗೊಳಿಸಿತು. ಸುಮಾರು 40 ವರ್ಷಗಳ ಹಿಂದಿನ ನನ್ನ ಚಾರಣವನ್ನು ನೆನಪಿಸಿತು.

ಕುದುರೆಮುಖ ಪರ್ವತಕ್ಕೆ 1985ರಲ್ಲಿ ಚಾರಣ ಹೋದಾಗ ಶಿಖರದಲ್ಲಿನ ಬಂಡೆಯ ಮೇಲೆ ರಾತ್ರಿ ಆಕಾಶವನ್ನು ನೋಡುತ್ತಾ ಮಲಗಿ ಅನುಭವಿಸಿದ ಅದ್ಭುತ ರೋಮಾಂಚನ ಈಗಲೂ ಪುಳಕಿತಗೊಳಿಸುವಷ್ಟು ದಟ್ಟವಾಗಿದೆ.

— ಬಿ. ಸತ್ಯನಾರಾಯಣ ಅರಸ, ತೆಕ್ಕಟ್ಟೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in